# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103, ☎ : 0816-2255650, 2273511ಫ್ಯಾಕ್ಸ್ : 0816-2270719


ಸಂಖ್ಯೆ:ತು.ವಿ.: ಪ.ವಿ.:ವಿ.ನಿ.-07/2021-22/444 ದಿನಾಂಕ: 01.10.2021

## ಸುತ್ತೋಲೆ

ವಿಷಯ: 2021 ರ ಮಾರ್ಚ್, ಏಪ್ರಿಲ್ ಮತ್ತು ಆಗಸ್ಟ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿಗಳ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶ ಪ್ರಕಟಣೆ ಮತ್ತು ಉತ್ತರ ಪತ್ರಿಕೆಗಳ ಛಾಯಾ ಪ್ರತಿ / ಮರುಮೌಲ್ಯಮಾಪನ / ಛಾಲೆಂಜ್ ಮೌಲ್ಯಮಾಪನದ ಮಾಹಿತಿ ಕುರಿತು.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2021 ರ ಮಾರ್ಚ್, ಏಪ್ರಿಲ್ ಮತ್ತು ಆಗಸ್ಟ್ ಮಾಹೆಗಳಲ್ಲಿ ನಡೆದ ವಿವಿಧ ಸ್ನಾತಕ ಪದವಿಗಳಾದ ಬಿ.ಎ/ ಬಿ.ಕಾಂ/ ಬಿ.ಎಸ್.ಡಬ್ಲ್ಯು/ಬಿ.ಸಿ.ಎ/ಬಿ.ಎಸ್ಸಿ/ ಬಿ.ಬಿ.ಎಂ ಮತ್ತು ಬಿ.ವೋಕ್‌ನ I ಮತ್ತು III ನೇ ಸೆಮಿಸ್ಟರ್ (ಸಿಬಿಸಿಎಸ್) ಮತ್ತು I, III & V ನೇ ಸೆಮಿಸ್ಟರ್ (ನಾನ್-ಸಿಬಿಸಿಎಸ್) ಹಾಗೂ ಬಿಎಫ್.ಎ. ಪದವಿಯ (ಅಪ್ಲೈಡ್ ಆರ್ಟ್ ಅಂಡ್ ಪೇಯಿಂಟಿಂಗ್) V, VII & IX, ಬಿ.ಎ. ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಪದವಿಯ V, VII & IX, ಮತ್ತು ಬಿ.ವಿ.ಎ. I, III & V ನೇ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಸದರಿ ಮಾಹಿತಿಯನ್ನು ವಿದ್ಯಾರ್ಥಿಗಳ ಗಮನಕ್ಕೆ ತರುವುದು.

ತಡೆಹಿಡಿಯಲಾಗಿರುವ ಅಥವಾ ಫಲಿತಾಂಶ ಪ್ರಕಟವಾಗದಿರುವ ಕುರಿತು ವಿದ್ಯಾರ್ಥಿಗಳು ಸೂಕ್ತ ಮಾಹಿತಿಗಳನ್ನು ಪ್ರಾಂಶುಪಾಲರ ಮೂಲಕ ಈ ಕಚೇರಿಗೆ ಒದಗಿಸಿ, ಒಂದು ವಾರದೊಳಗಾಗಿ ಫಲಿತಾಂಶವನ್ನು ಪಡೆದುಕೊಳ್ಳತಕ್ಕದ್ದು.

| | | |
|---|---|---|
| 1. | ವಿದ್ಯಾರ್ಥಿಗಳು ಛಾಯಾ ಪ್ರತಿಗಾಗಿ ಕಾಲೇಜಿನಲ್ಲಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | 12.10.2021 |
| 2. | ಕಾಲೇಜಿನವರು ಆನ್‌ಲೈನ್‌ನಲ್ಲಿ ನಮೂದಿಸಲು ಕೊನೆಯ ದಿನಾಂಕ (ಛಾಯಾ ಪ್ರತಿ) | 16.10.2021 |
| 3. | ವಿಶ್ವವಿದ್ಯಾನಿಲಯಕ್ಕೆ ವಿವರಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ಛಾಯಾ ಪ್ರತಿ) | 19.10.2021 |
| 4. | ಪರೀಕ್ಷಾ ವಿಭಾಗದಿಂದ ಕಾಲೇಜಿನವರು ಜೆರಾಕ್ಸ್ (ಛಾಯಾ ಪ್ರತಿ) ಪ್ರತಿಯನ್ನು ಪಡೆಯುವ ದಿನಾಂಕ | 28.10.2021 (ಬೆಳಗ್ಗೆ 11:00 ಗಂಟೆಯ ನಂತರ) |
| 5. | ವಿದ್ಯಾರ್ಥಿಗಳು ಮರುಮೌಲ್ಯಮಾಪನ/ ಛಾಲೆಂಜ್ ಮೌಲ್ಯಮಾಪನಕ್ಕೆ ಕಾಲೇಜಿನಲ್ಲಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | 04.11.2021 |
| 6. | ಮರುಮೌಲ್ಯಮಾಪನ/ಛಾಲೆಂಜ್ ಮೌಲ್ಯಮಾಪನಕ್ಕೆ ಸಲ್ಲಿಸಿದ ಅರ್ಜಿಗಳ ವಿವರಗಳನ್ನು ಕಾಲೇಜಿನವರು ಆನ್‌ಲೈನ್‌ನಲ್ಲಿ ನಮೂದಿಸಲು ಕಡೆಯ ದಿನಾಂಕ | 06.11.2021 |
| 7. | ಮರುಮೌಲ್ಯಮಾಪನ/ಛಾಲೆಂಜ್ ಮೌಲ್ಯಮಾಪನಕ್ಕೆ ಸಲ್ಲಿಸಿದ ಅರ್ಜಿಗಳ ವಿವರಗಳನ್ನು ಕಾಲೇಜಿನವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕಡೆಯ ದಿನಾಂಕ | 08.11.2021 |

ಶೇಕಡಾ 15ಕ್ಕಿಂತ ಕಡಿಮೆ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಚಾಲೆಂಜ್ ಮೌಲ್ಯಮಾಪನಕ್ಕೆ ಅರ್ಜಿಸಲ್ಲಿಸತಕ್ಕದ್ದು. ಆದಾಗ್ಯೂ ಶೇಕಡಾ 15 ಕ್ಕಿಂತ ಕಡಿಮೆ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲ. ಪ್ರಾಂಶುಪಾಲರು ಅರ್ಜಿಗಳನ್ನು ಪರಿಶೀಲಿಸಿ, ಆನ್‌ಲೈನ್‌ನಲ್ಲಿ ನಮೂದಿಸುವುದು.

ಛಾಲೆಂಜ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವವರು ಕಡ್ಡಾಯವಾಗಿ ನಿಗದಿತ ಶುಲ್ಕ ಪಾವತಿಸಿ, ಉತ್ತರ ಪತ್ರಿಕೆಯ ಛಾಯಾಪ್ರತಿಯನ್ನು ಪಡೆದು ಸಂಬಂಧಿಸಿದ ಅಧ್ಯಾಪಕರಿಂದ ಮೌಲ್ಯಮಾಪನ ಮಾಡಿಸಿ ನೀಡಿರುವ ಅಂಕಗಳಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳು ನಿಗದಿತ ಮರುಮೌಲ್ಯಮಾಪನ ಶುಲ್ಕದೊಂದಿಗೆ ಕಡ್ಡಾಯವಾಗಿ ಒಂದು ವಿಷಯಕ್ಕೆ ರೂ.500-00 (ರೂಪಾಯಿ ಐದು ನೂರು ಮಾತ್ರ) ಗಳ ಹೆಚ್ಚುವರಿ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸುವುದು.

(....2)

ನಿಗದಿತ ದಿನಾಂಕದ ನಂತರ ಸಲ್ಲಿಸುವ ಅರ್ಜಿಗಳನ್ನು ಯಾವುದೇ ಕಾರಣದಿಂದಲೂ ಪರಿಗಣಿಸಲಾಗುವುದಿಲ್ಲ.

ಛಾಯಾಪ್ರತಿ, ಮರುಮೌಲ್ಯಮಾಪನ ಮತ್ತು ಛಾಲೆಂಜ್ ಮೌಲ್ಯಮಾಪನ ಶುಲ್ಕವನ್ನು ತಮ್ಮ ಕಾಲೇಜಿನಲ್ಲಿಯೇ ಪಾವತಿಸಿಕೊಂಡು, RTGS / NEFT ಮೂಲಕ ವಿಶ್ವವಿದ್ಯಾನಿಲಯದ ಎಸ್.ಬಿ.ಐ. ಖಾತೆ ಸಂ. 36954908103 ಗೆ ನಿಗದಿಪಡಿಸಿದ ದಿನಾಂಕದೊಳಗೆ ಪಾವತಿಸಿ, ಸೂಕ್ತ ವಿವರಗಳೊಂದಿಗೆ ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ಸಲ್ಲಿಸುವುದು. ಛಾಯಾಪ್ರತಿ, ಮರುಮೌಲ್ಯಮಾಪನ ಮತ್ತು ಛಾಲೆಂಜ್ ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳ ವಿವರಗಳನ್ನು ದ್ವಿ ಪ್ರತಿಯಲ್ಲಿ ಸಲ್ಲಿಸಲು ಕೋರಲಾಗಿದೆ.

<u>ಶುಲ್ಕಗಳ ವಿವರ:</u>

| | | | | |
|---|---|---|---|---|
| 1. | Xerox copy for one subject with Application Fee | : | Rs. | 210-00 |
| 2. | Revaluation for one subject with Application Fee | : | Rs. | 260-00 |
| 3. | Challenge Valuation Fee (Rs.210+260+500) | : | Rs. | 970-00 |

<u>ವಿ.ಸೂ: ಪರಿಶಿಷ್ಟ ಜಾತಿ /ಪಂಗಡ/ ಪ್ರವರ್ಗ- I ರ ವಿದ್ಯಾರ್ಥಿಗಳಿಗೆ ಮೇಲೆ ತಿಳಿಸಿರುವ ಶುಲ್ಕದಲ್ಲಿ ಶೇ.50 ರಷ್ಟು ರಿಯಾಯಿತಿ ಇರುತ್ತದೆ.</u>

ಆದೇಶದ ಮೇರೆಗೆ

ಕುಲಸಚಿವರು (ಪರೀಕ್ಷಾಂಗ)

ಗೆ,

ಪ್ರಾಂಶುಪಾಲರು, ಎಲ್ಲಾ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು- ಇಂದೇ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು
2. ವಿಭಾಗದ ಮೇಲ್ವಿಚಾರಕರು, ಫಲಿತಾಂಶ ಗಣಕೀಕರಣ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.- ಇಂದೇ ಪ್ರಾಂಶುಪಾಲರುಗಳ ಇ-ಮೇಲ್ ವಿಳಾಸಕ್ಕೆ ಕಳುಹಿಸುವುದು.
3. ಕಛೇರಿ ಪ್ರತಿ